ಕನ್ಸರ್ವೇಷನ್ ವರ್ಕ್ಸ್‌ನಲ್ಲಿ ಸಾಕಷ್ಟು ಹಣ ಮಿಸ್‌ಯೂಸ್ ಆಗುತ್ತಿದೆ ಎಂಬುದು ಸರಕಾರದ ಗಮನಕ್ಕೆ ಬಂದಿದೆಯೇ ಬಂದಿದ್ದರೆ ಅದನ್ನು ಸ್ಟಾಪ್ ಮಾಡುವುದಕ್ಕೆ ಸರಕಾರ ಏನು ಕ್ರಮ ಕೈಗೊಳ್ಳುತ್ತದೆ?

ಶ್ರೀ ಜಿ. ಪುಟ್ಟಸ್ವಾಮಿಗೌಡ: ಸನ್ಮಾನ್ಯ ಅಧ್ಯಕ್ಷರೇ, ಭೂಸಾರ ಸಂರಕ್ಷಣೆ ಯೋಜನೆಯಿಂದ ಹೆಚ್ಚು ಅನುಕೂಲವಾಗಿದೆಯೇ ಎಂಬ ಬಗ್ಗೆ ಸಮೀಕ್ಷೆ ಏನಾದರೂ ಮಾಡಿದ್ದೀರಾ? ಮಾಡಿದ್ದರೆ ಎಷ್ಟಾಗಿದೆ ಎಂಬ ಮಾತನ್ನು ಮಾನ್ಯ ಮಿತ್ರರು ಕೇಳುತ್ತಿದ್ದಾರೆ. ಈ ಬಗ್ಗೆ ಸಮೀಕ್ಷೆ ಮಾಡುವುದಕ್ಕಾಗಿ ನಾವು ಒಂದು ಇವಾಲ್ಯುಯೇಷನ್ ಕಮಿಟಿ ಎಂದು ಮಾಡಿದ್ದೇವೆ. Director of Planning in Agricultural Department ಅವರ ಮುಖಂಡತ್ವದಲ್ಲಿ ಕಾರ್ಯವಹಿಸಿದ್ದೇವೆ. ಅವರು ಕೆಲಸ ಮಾಡುತ್ತಿದ್ದಾರೆ. ವರದೀ ಬಂದನಂತರ ಸೂಕ್ತ ಕ್ರಮ ಕೈಗೊಳ್ಳುತ್ತೇವೆ. ಮತ್ತೊಂದು ಮಾತು ಏನು ಹೇಳಿದ್ದಾರೆ ಎಂದರೆ ಈ ಒಂದು ಕ್ಷೇತ್ರದಲ್ಲಿ ಬಹಳಷ್ಟು ಮಟ್ಟಿಗೆ ಅವ್ಯವಹಾರವಾಗುತ್ತದೆ, ಇದು ಸರಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದರೆ ಏನು ಕ್ರಮ ತೆಗೆದುಕೊಳ್ಳುತ್ತೀರಿ? ಏತಕ್ಕೆ ಅದನ್ನು ನಿಲ್ಲಿಸಬಾರದು ಎಂಬ ಪ್ರಶ್ನೆ ಕೇಳಿದ್ದಾರೆ. ಈ ಒಂದು ಕ್ಷೇತ್ರದಲ್ಲಿ ಕಂಡುಬಂದ ಒಂದೆರಡು ಪ್ರಕರಣಗಳಲ್ಲಿ ಹಿಂದಿನ ಸರಕಾರದವರು ಕ್ರಮ ಕೈಗೊಂಡಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳನ್ನು ನಾವು ಅಮಾನತ್ತಿನಲ್ಲಿಟ್ಟು ತನಿಖೆ ಮಾಡುತ್ತಿದ್ದೇವೆ. ನಿರ್ದಿಷ್ಟ ಪ್ರಕರಣಗಳು ಯಾವುದಾದರೂ ಗಮನಕ್ಕೆ ಬಂದರೆ ಅದರ ಬಗ್ಗೆ ಕ್ರಮ ತೆಗೆದುಕೊಂಡು ಅಪರಾಧದ ತೀವ್ರತೆಯ ಹಿನ್ನೆಲೆಯಲ್ಲಿ ಸೂಕ್ತ ಕ್ರಮ ಕೈಗೊಳ್ಳುತ್ತೇವೆ. ಈ ಒಂದು ಯೋಜನೆ ಒಣಭೂಮಿಗೆ ಸಾಕಷ್ಟು ಪ್ರಯೋಜನಕಾರಿ ಎಂಬ ಭಾವನೆ ಇವತ್ತಿನವರೆಗೆ ಇದೆ. ಆದುದರಿಂದ ಇದನ್ನು ಮುಂದುವರಿಸುತ್ತಿದ್ದೇವೆ. ತಾವು ಹೇಳಿದಹಾಗೆ ಅವ್ಯವಹಾರದ ಸರಮಾಲೆ ಜಾಸ್ತಿಯಾಗುತ್ತಿದೆ, ಅನುಕೂಲ ಆಗುವುದು ಕಂಡು ಬರುವುದಿಲ್ಲ ಎಂದು ಕಂಡು ಬಂದರೆ ಅವರು ಹೇಳಿದ ಪ್ರಶ್ನೆಯನ್ನು ಪರಿಶೀಲಿಸಲಾಗುತ್ತದೆ.

ಶ್ರೀ ಆರ್.ವಿ. ದೇಶಪಾಂಡೆ : ಇದರಿಂದ ಈಲ್ಡ್ ಹೆಚ್ಚಾಗಿದೆಯೇ? ಆಗಿದ್ದರೆ ಎಷ್ಟು ಪರ್ಸೆಂಟ್ ಹೆಚ್ಚಾಗಿದೆ? you have got the files in the Agricultural Dept. You can find out.

ಶ್ರೀ ಜಿ. ಪುಟ್ಟಸ್ವಾಮಿಗೌಡ : ಅದನ್ನೇ ಸಮೀಕ್ಷೆ ಮಾಡುತ್ತಿದ್ದೇವೆ.

ಶ್ರೀ ಆರ್.ವಿ. ದೇಶಪಾಂಡೆ : ಸಮೀಕ್ಷೆ ಮಾಡಲಾಗಿದೆ. You can find out because you have got files in your department.

ಪರ್ಸೆಂಟೇಜ್ ಹೆಚ್ಚಾಗಿದೆ, ಫೈಲ್ ತೆಗೆದು ನೋಡಿರಿ.

ಬರಗಾಲ ಪ್ರಯುಕ್ತ ಗಂಡಸಿ ಕ್ಷೇತ್ರದಲ್ಲಿ ಕೊರೆದಿರುವ ಕೊಳವೆ ಬಾವಿಗಳು.

1697 - ಶ್ರೀ ಬಿ. ಶಿವರಾಮು (ಗಂಡಸಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬರಗಾಲದ ಪ್ರಯುಕ್ತ ಗಂಡಸಿ ಕ್ಷೇತ್ರದಲ್ಲಿನ ಜನತೆಯಿಂದ ಬೇಡಿಕೆ ಇರುವ ಕೊಳವೆ ಬಾವಿಗಳ ಸಂಖ್ಯೆ ಎಷ್ಟು?

ಆ) ಇಲ್ಲಿಯವರೆಗೆ ಬರಗಾಲದ ಯೋಜನೆಯಡಿಯಲ್ಲಿ ಕೊರೆದಿರುವ ಕೊಳವೆ ಬಾವಿಗಳ ಸಂಖ್ಯೆ ಎಷ್ಟು? ಸದರಿ ಕ್ಷೇತ್ರದಲ್ಲಿನ ಯಾವ ಯಾವ ಗ್ರಾಮಗಳಲ್ಲಿ ಎಷ್ಟು ಕೊಳವೆ ಬಾವಿಗಳನ್ನು ಕೊರೆಯಲಾಗಿದೆ. ಎಂಬ ಬಗ್ಗೆ ಮಾಹಿತಿಯನ್ನೊದಗಿಸುವುದು?

ಇ) ಉಳಿದ ಕೊಳವೆ ಬಾವಿಗಳನ್ನು ಕೊರೆಯದಿಲ್ಲದಂಥ ಗ್ರಾಮಗಳಲ್ಲಿ ಸರ್ಕಾರದವರು ಬಾವಿಗಳನ್ನು ಕೊರೆಸಿಕೊಟ್ಟು ನೀರನ್ನು ಒದಗಿಸುವ ಯೋಜನೆ ಏನಾದರೂ ಇದೆಯೇ?

ಈ) ಮಾನ್ಯ ಮಂತ್ರಿಗಳು ಹಾಸನ ಜಿಲ್ಲೆಗೆ ಭೇಟಿ ಇತ್ತಾಗ ನೀರಿಲ್ಲದ ಗ್ರಾಮಗಳಿಗೆ, ನೀರನ್ನು ಒದಗಿಸುವ ಆಶ್ವಾಸನೆಯನ್ನು ಕೊಟ್ಟಿದ್ದು ನಿಜವೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :

ಅ) 15

ಆ) 15

ತಲಾ ಒಂದು ಕೊಳವೆ ಬಾವಿಯನ್ನು ಈ ಕೆಳಗಿನ ಗ್ರಾಮಗಳಲ್ಲಿ ಕೊರೆಯಲಾಗಿದೆ:

1) ದನುಮನಹಳ್ಳಿ (2) ಹೆಗ್ಗಡಿಹಳ್ಳಿ (3) ಅಡುನಹಳ್ಳಿ (4) ಸಣ್ಣೇನಹಳ್ಳಿ (5) ಗೌಡಗೆರೆ (6) ಸಂಪನಹಳ್ಳಿ (7) ಸಮನಹಳ್ಳಿ (8) ಬನವಾಸಿ (9) ಯಲಗುಂದ (10) ಚಿಕ್ಕಗಂಡಸಿ (11) ಮಂದರಾಪುರ (12) ಗೋವಿಂದಪುರ (13) ದೊಡ್ಡ ಗಂಡಸಿ (14) ಬಸವನಹಳ್ಳಿ (15) ಯಾವಗಲ್

ಇ) ಅಗತ್ಯತೆಗನುಗುಣವಾಗಿ ಕ್ರಮ ಕೈಗೊಳ್ಳಲಾಗುವುದು

ಈ) ಹೌದು.

ಶ್ರೀ ಬಿ. ಶಿವರಾಮು : ಮಾನ್ಯ ಅಧ್ಯಕ್ಷರೇ, ಬರಗಾಲದ ಪ್ರಯುಕ್ತ ಗಂಡಸಿ ಕ್ಷೇತ್ರದಲ್ಲಿ ಜನತೆಯಿಂದ ಬೇಡಿಕೆ ಇರುವ ಕೊಳವೆ ಬಾವಿಗಳ ಸಂಖ್ಯೆ ಎಷ್ಟು ಎಂಬ ಪ್ರಶ್ನೆಗೆ 15 ಎಂಬ ಮಾತನ್ನು ಹೇಳಿದ್ದಾರೆ. ಬಹುಶಃ ನನ್ನ ಕ್ಷೇತ್ರದಲ್ಲಿ ಬರಗಾಲ ಇದೆ ಎಂಬುದನ್ನು ಕಳೆದ ಜುಲೈನಿಂದಲೂ ಸರಕಾರದ ಗಮನಕ್ಕೆ ತರುವ ಕೆಲಸ ಮಾಡಿದ್ದೇನೆ. 9 ತಿಂಗಳು ಆಗಿದೆ. ನಮ್ಮ ಕ್ಷೇತ್ರದಲ್ಲಿ ಒಟ್ಟು 396 ಹಳ್ಳಿಗಳು ಇವೆ, 14 ಮಂಡಲ್‌ಗಳಿವೆ. 13 ಮಂಡಲ್ ಪಂಚಾಯತಿಗೆ ಈ ಬರಗಾಲದಲ್ಲಿ ಕೇವಲ 15 ಕೊಳವೆ ಬಾವಿಗಳಿಗೆ ಬೇಡಿಕೆ ಬಂದಿದೆ ಎಂದರೆ ನಂಬಬಹುದೇ? ಎರಡನೆಯದಾಗಿ, 15 ಕೊಳವೆ ಬಾವಿಗಳನ್ನು ಹಾಕಿದ್ದೇವೆ ಎಂದು ಹೇಳಿದ್ದಾರೆ, ಅದರಲ್ಲಿ ಬನವಾಸಿ ಮತ್ತು ಬಸವನಹಳ್ಳಿಗಳು ನನಗೆ ಸೇರಿಲ್ಲ. ಅಲ್ಲಿಗೆ 13 ಹಳ್ಳಿಗಳಿಗೆ ಮಾತ್ರ ಇದುವರೆಗೆ ಕೊಳವೆ ಬಾವಿಗಳನ್ನು ಹಾಕತಕ್ಕಂಥ ಕೆಲಸ ಆಗಿದೆ. ಹದಿಮಾರು ಮಂಡಲ್‌ನಲ್ಲಿ ಒಂದೊಂದು ಮಂಡಲ್ಗೆ ಒಂದೊಂದು ಬೋರ್ವೆಲ್ ಆದಹಾಗೆ ಆಯಿತು. 9 ತಿಂಗಳಲ್ಲಿ 13 ಬೋರ್ವೆಲ್ ಎಂದರೆ ಒಂದು ತಿಂಗಳಿಗೆ ಒಂದೂವರೆ ಬೋರ್ವೆಲ್ ಲೆಕ್ಕದಲ್ಲಿ ಹಾಕಿದ್ದಾರೆ. ಹೀಗಾದರೆ 396 ಗ್ರಾಮಕ್ಕೆ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸುವುದು ಹೇಗೆ? ನಾವಾದರೂ ಈ ತಾಲ್ಲೂಕು ಸಮಿತಿಗಳಲ್ಲಿ ಪ್ರಧಾನರ ಸಮ್ಮುಖದಲ್ಲಿ, ಶಾಸಕರು ತಾಲ್ಲೂಕ್ ಪಂಚಾಯಿತಿ ಮೆಂಬರ್ಸ್ ಎಲ್ಲಾ ಸೇರಿ ಪ್ರತಿ ತಿಂಗಳೂ ಎಷ್ಟು ಬಾವಿಗಳ ಅವಶ್ಯಕತೆ ಇದೆ ಎಂಬುದನ್ನು ನಾವು ಮಾಡಿದ ಲೆಕ್ಕದಲ್ಲಿ ಒಟ್ಟು ಅರಸಿಕೆರೆ ಮತ್ತು ಹಾಸನ ತಾಲ್ಲೂಕಿನಲ್ಲಿ 80 ಹಳ್ಳಿಗಳಿಗೆ ಕೊಳವೆ ಬಾವಿಗಳ ಅವಶ್ಯಕತೆ ಇದೆ ಎಂದು ಕಳುಹಿಸಿದ್ದೇವೆ. ಮಾನ್ಯ ಮಂತ್ರಿಗಳು ಹಾಸನ ಜಿಲ್ಲೆಗೆ ಭೇಟಿ ನೀಡಿದಾಗ 30 ಹಳ್ಳಿಗಳಿಗೆ ಎಮರ್ಜೆನ್ಸಿ ಬೋರ್‌ವೆಲ್ ಅವಶ್ಯಕತೆ ಇದೆ ಎಂದು ಒಂದು ಪಟ್ಟಿ ಅವರಿಗೆ ಕೊಟ್ಟಾಗ ಅವರು ಕೂಡಲೇ ಜಿಲ್ಲಾಧಿಕಾರಿಗಳಿಗೆ ಕೊಟ್ಟು ಬೋರ್‌ವೆಲ್ ಹಾಕಿಸತಕ್ಕಂಥ ಕೆಲಸ ಮಾಡಬೇಕೆಂದು ಡೈರೆಕ್ಷನ್ ಕೊಟ್ಟರು. ಆದರೆ ಇದರ ಪ್ರಕಾರ ಇಲ್ಲಿಯವರೆಗೆ ಆಗಿರತಕ್ಕದ್ದು 13 ಕೊಳವೆಬಾವಿಗಳು. ಈ ದಿಸೆಯಲ್ಲಿ ಕೆಲಸ ಮಾಡಿದರೆ ನಮಗೆ ನಮ್ಮ ಕ್ಷೇತ್ರದಲ್ಲಿರತಕ್ಕಂಥ ನೀರಿನ ಕೊರತೆಯನ್ನು ನೀಗಿಸುವುದಕ್ಕೆ ಸಾಧ್ಯವೇ ಎಂದು ಮಾನ್ಯ ಮಂತ್ರಿಗಳಿಂದ ಉತ್ತರ ನಿರೀಕ್ಷೆ ಮಾಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೇ, ಈಗಾಗಲೇ ಬೇಡಿಕೆ ಎಷ್ಟು ಎಂದರೆ 15 ಎಂದು ಹೇಳಿದ್ದೇನೆ. ನಮಗೆ ಅಲ್ಲಿ ಅಪ್ಲಿಕೇಷನ್ಸ್ ಬಂದಿದ್ದು ಅಷ್ಟು. 15ನ್ನು ನಾವು ಪ್ರಾರಂಭ ಮಾಡಿದ್ದೇವೆ. ಸ್ಕೇರ್ಸಿಟಿ ರಿಲೀಫ್ ಫಂಡ್‌ನಿಂದ 15

ಮಾಡಿದ್ದು, ರೆಗ್ಯುರಲ್ ಫಂಡ್, ಎನ್.ಆರ್.ಡಬ್ಲ್ಯೂ.ಎಸ್.ನಲ್ಲಿ ಸುಮಾರು 20 ಲಕ್ಷದ 16 ಸಾವಿರ ರೂಪಾಯಿಗಳನ್ನು ಆ ಕ್ಷೇತ್ರದಲ್ಲಿ ಖರ್ಚು ಮಾಡಿದ್ದೇವೆ. ಅದರಲ್ಲಿ 20 ಲಕ್ಷ ಎಂದರೆ, ರೆಗ್ಯುಲರ್ ಫಂಡ್‌ನಲ್ಲಿ ಪೈಪ್ಡ್‌ವಾಟರ್, ಮಿನಿ ವಾಟರ್, ಬೋರ್ವೆಲ್ ಮತ್ತು ರಿಪೇರಿ ಈ ಎಲ್ಲಾ ಲೆಕ್ಕಕ್ಕೆ ತೆಗೆದುಕೊಂಡಾಗ ಇನ್ನು ಹೆಚ್ಚಾಗುತ್ತದೆ. 15 ಎಂದರೆ ಇದು ಸಪ್ಲಿಮೆಂಟರಿ. ಇದರ ಮೇಲೆ ಡಿಪೆಂಡ್ ಇರತಕ್ಕಂಥದ್ದಾಲ್ಲ. ಅಂದರೆ ಉಳಿದಂಥ 20 ಲಕ್ಷ ಎಲ್ಲಿ ಹೋಯಿತು ಎಂದರೆ ಅಲ್ಲೇ ಖರ್ಚು ಮಾಡಿದ್ದೇವೆ, ಅವರ ಹತ್ತಿರ ಪೂರ್ತಿ ಮಾಹಿತಿ ಇದೆ, ಆದರೂ ಪ್ರಶ್ನೆ ಹಾಕಿದ್ದಾರೆ ಇದು ಏತಕ್ಕೆ ಎಂದು ನನಗೆ, ಗೊತ್ತಾಗುತ್ತಿಲ್ಲ.

ಶ್ರೀ ಬಿ. ಶಿವರಾಮು : ಅಧ್ಯಕ್ಷರೇ, ಎನ್.ಆರ್.ಡಬ್ಲ್ಯೂ.ಎಸ್., ಎ.ಆರ್.ಡಬ್ಲ್ಯೂ.ಎಸ್.ನಲ್ಲಿ ಒಂದು ಯೋಜನೆಗೆ 3-4 ಲಕ್ಷ ರೂಪಾಯಿ ಖರ್ಚು ಮಾಡುತ್ತಾರೆ. 20 ಲಕ್ಷ ಎಂದರೆ ಎಷ್ಟು ಯೋಜನೆ ಆಗುತ್ತದೆ, ಎಷ್ಟು ಹಳ್ಳಿಗೆ ನೀರು ಒದಗಿಸುವುದಕ್ಕೆ ಸಾಧ್ಯ ಎಂಬುದನ್ನು ತಾವೇ ಯೋಚನೆ ಮಾಡಿ. ಮತ್ತು ಹಳ್ಳಿಗಳಲ್ಲಿ ಬರಗಾಲ ಇರುವುದರಿಂದ ಅಲ್ಲಿಗೆ ನಾವು ನೀರು ಒದಗಿಸಬೇಕೆಂದು ಮುಖ್ಯವಾಗಿ ಕೇಳಿರತಕ್ಕ ಪ್ರಶ್ನೆ. ಬರಗಾಲದಲ್ಲಿ ಅವಶ್ಯಕತೆಯ ಆಧಾರದ ಮೇಲೆ ಮಾಡುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಅವಶ್ಯಕತೆ ಇದೆ ಎಂದು ಅಸ್ಸೆಸ್ ಮಾಡತಕ್ಕಂಥವರು ಯಾರು? ಈಗ ನಾವು ಶಾಸಕರಾಗಲು ಅಥವಾ ಮಂಡಲ ಪಂಚಾಯತಿ ಪ್ರಧಾನರು ಆಗಲೀ ಜಿಲ್ಲಾ ಪರಿಷತ್ತು ಸದಸ್ಯರುಗಳು ಎಲ್ಲರೂ ಸೇರಿ ಸಮಿತಿ ತೀರ್ಮಾನ ಮಾಡಿ ಕಳುಹಿಸಿರತಕ್ಕಂಥ ನಿರ್ಣಯವನ್ನು ಏನು ಮಾಡುತ್ತೀರಿ? ಅದು ಸರಿಯಲ್ಲವೇ? ಈಗ ಆ ನಿರ್ಣಯದ ಪ್ರಕಾರ ಎಷ್ಟು ಜಿಲ್ಲಾಧಿಕಾರಿಗಳಿಗೆ ಆಗಲೀ ಅಥವಾ ಜಿಲ್ಲಾ ಪರಿಷತ್ತು ಮುಖ್ಯಕಾರ್ಯದರ್ಶಿಗಳಿಗೆ ಆಗಲಿ ಬಂದಿದೆ. ಇದು ನನ್ನ ಪ್ರಮುಖವಾದ ಪ್ರಶ್ನೆ. ಕೇವಲ 15 ಬೋರ್‌ವೆಲ್‌ಗಳನ್ನು ಕೊಟ್ಟು 396 ಹಳ್ಳಿಗಳಿಗೆ ನೀರು ಒದಗಿಸಲು ಹೇಗೆ ಸಾಧ್ಯ? ಈಗ ಇದರಿಂದ 50ಹಳ್ಳಿಗಳಿಗೆ ಎ.ಆರ್.ಡಬ್ಲ್ಯೂ.ಎಸ್.ನಲ್ಲಿ ಮಿನಿವಾಟರ್ ಸಪ್ಲೈ ಸ್ಕೀಮ್‌ನಲ್ಲಿ ಎನ್.ಆರ್.ಡಬ್ಲ್ಯೂ.ಎಸ್.ನಲ್ಲಿ ನೀರು ಕೊಟ್ಟಿದ್ದೇವೆ ಎಂದು ತಿಳಿದುಕೊಳ್ಳೋಣ, ಇಲ್ಲಿ ನೀವು ಒಂದು ನೂರು ಹಳ್ಳಿಗಳಿಗೆ ಕೊಟ್ಟಿದ್ದೀರಿ ಎಂದು ಇಟ್ಟುಕೊಂಡರೂ ಇನ್ನೂ 296 ಹಳ್ಳಿಗಳು ಉಳಿಯುತ್ತವೆ. ಈ 296 ಹಳ್ಳಿಗಳಿಗೆ ಇವತ್ತಿನ ಪರಿಸ್ಥಿತಿಯಲ್ಲಿ ಅಲ್ಲಿ ಆಗಿರತಕ್ಕಂಥ ಮಳೆ ಅಂದಾಜು ಕೂಡ ಮಾನ್ಯ ಮಂತ್ರಿಗಳು ನಮ್ಮ ಜಿಲ್ಲೆಗೆ ಬಂದಂತಹ ಸಂದರ್ಭದಲ್ಲಿ ಮಾಹಿತಿ ಕಲೆಕ್ಟ್ ಮಾಡಿ ಕೊಟ್ಟಿದ್ದೇವೆ. ನನ್ನ ಕ್ಷೇತ್ರದಲ್ಲಿ ಎಷ್ಟು ಮಳೆ ಬಂದಿದೆ ಎನ್ನುವ ಪೂರ್ಣ ಮಾಹಿತಿಯನ್ನು ತೆಗೆದುಕೊಂಡಿದ್ದಾರೆ. ಅಲ್ಲಿ ಮಳೆ ಆಗಿರುವುದು 6 ಇಂಚು 8 ಇಂಚು 9 ಇಂಚು. ಜುಲೈನಿಂದ ಈ ಸಮಸ್ಯೆ ಇದೆ. ಕಳೆದ 9 ತಿಂಗಳುಗಳಿಂದ ಈ 296 ಹಳ್ಳಿಗಳು ಉಳಿದುಕೊಂಡಿವೆ. ಕೇವಲ 15 ಬೋರ್‌ವೆಲ್‌ಗಳು ಸಾಕೆಂದರೆ ತಾವು ಒಪ್ಪುತ್ತೀರೀ? ಮತ್ತು.....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ ಈಗಾಗಲೇ ಅವರು ಹೇಳಿದ್ದಾರೆ. ನನ್ನ ಹತ್ತಿರ 200 ಹಳ್ಳಿಗಳಿಗೂ ಜಾಸ್ತಿ ಬೇಡಿಕೆ ಇರತಕ್ಕಂಥಾದ್ದು ಅದರಲ್ಲಿ 70 ಹಳ್ಳಿಗಳಿಗೆ ಬೋರ್‌ವೆಲ್‌ಗಳು ಬೇಕಾಗಿದೆ. ಆದರೆ ನೀವು ಕೇವಲ 15 ಮಾತ್ರ ಕೊಟ್ಟಿದ್ದೀರಿ. ಇದು ಸರಿಯಾಗುವುದಿಲ್ಲ. ಎನ್ನುವ ಮಾತನ್ನು ಅವರೇ ಹೇಳಿದ್ದಾರೆ. ಇದರ ಅರ್ಥ ಏನು? 200 ಹಳ್ಳಿಗಳಿಗೂ ಜಾಸ್ತಿ ಇದ್ದರೂ ಕೂಡ 70 ಹಳ್ಳಿಗಳಲ್ಲಿ ಮಾತ್ರ ಈ ಸಮಸ್ಯೆ ಇದೆ ಎನ್ನತಕ್ಕಂಥ ಮಾತನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಈಗಾಗಲೇ 15 ಬೋರ್‌ವೆಲ್‌ಗಳಿಗೆ ಹಣ ಬಿಡುಗಡೆ ಮಾಡಿದ್ದೇವೆ. ಉಳಿದ ಯಾವ ಯಾವ ಹಳ್ಳಿಗಳಲ್ಲಿ ಅವಶ್ಯಕತೆ ಇದೆ ನೀವು ತೆಗೆದುಕೊಳ್ಳಬಹುದು ಎನ್ನತಕ್ಕಂಥಾದ್ದನ್ನು ನೇರವಾಗಿ ಜಿಲ್ಲಾಧಿಕಾರಿಯವರಿಗೆ ಆದೇಶ

ಕೊಟ್ಟಿದ್ದೇವೆ. ಹಣದ ಕೊರತೆ ಇಲ್ಲ ಎಷ್ಟು ಬೇಕಾದರೂ ಕೊಡತಕ್ಕಂಥ ವ್ಯವಸ್ಥೆ ಮಾಡಿದ್ದೇವೆಂದು ನಾನು ಸ್ಪಷ್ಟವಾಗಿ ತಿಳಿಸಿದ್ದೇನೆ. ಅದರ ಪ್ರಕಾರ ಜಿಲ್ಲಾಧಿಕಾರಿಗಳು ಎಲ್ಲೆಲ್ಲಿ ಅವಶ್ಯಕತೆ ಇದೆ ಅಲ್ಲಿ ತೆಗೆದುಕೊಳ್ಳುತ್ತಾರೆ.

ಅಧ್ಯಕ್ಷರು : ಶ್ರೀ ಹೆಚ್.ಎಸ್. ಪಾಟೀಲ್.....

ಶ್ರೀ ಬಿ. ಶಿವರಾಮು : ಮಾನ್ಯ ಅಧ್ಯಕ್ಷರೇ.....

ಅಧ್ಯಕ್ಷರು : ತಾವು ಡಿ.ಸಿ.ಯವರನ್ನು ಕಾಂಟ್ಯಾಕ್ಟ್‌ಮಾಡಿ. ಅವರು ಎಷ್ಟು ಹಣ ಬೇಕಾದರೂ ಒದಗಿಸುತ್ತಾರೆ.

ಶ್ರೀ ಬಿ. ಶಿವರಾಮು : ಮಾನ್ಯ ಅಧ್ಯಕ್ಷರೇ ಹಣ ಒದಗಿಸಿರುವಲ್ಲಿ ಈಗ ಎರಡು ಬಾವಿಗಳು ಆಗಿವೆ. ಈಗ 20 ಲಕ್ಷ ಒದಗಿಸಿದ್ದಾರೆ. 8 ಕ್ಷೇತ್ರಗಳು ಇವೆ. ನಮಗೆ 70 ಬಾವಿಗಳು ಆಗಬೇಕು ನನ್ನ ಒಂದೊಂದ ಕ್ಷೇತ್ರಕ್ಕೆ 12 ಬಾವಿಗಳು ಬೇಕು. ಮಂತ್ರಿಗಳು ಹೇಳಿದಂತೆ .....

ಅಧ್ಯಕ್ಷರು : ನಿಮಗೆ 70 ಬೇಕು ಈಗ 13ಕ್ಕೆ ಕೊಟ್ಟಿದ್ದಾರೆ. ಇನ್ನೂ 12 ಕೊಡುತ್ತಾರೆ. ಬಾಕಿ ಬಗ್ಗೆ ಹೇಳಿ.....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಸಭಾಧ್ಯಕ್ಷರೇ ನಾನು ಹೇಳಿದ್ದೇನೆ. ಎಲ್ಲೆಲ್ಲಿ ಅವಶ್ಯಕತೆ ಇದೆ ಅಲ್ಲಿ ತೆಗೆದುಕೊಳ್ಳಿ ಎಂದು. 70ಕ್ಕೂ ಹಣ ಒದಗಿಸೋಣ. ಆದರೆ ನಾನು ಅವರ ಸಮ್ಮುಖದಲ್ಲಿ ಸುಮಾರು 3 ಗಂಟೆಗಳ ಕಾಲ ಕೂತು ಚರ್ಚೆ ಮಾಡಿದ್ದೇನೆ. ತಮಗೆ ಎಲ್ಲೆಲ್ಲಿ ಬೇಕು ಎಂದು ಬರೆದುಕೊಡಿ ಎಂದು ಕೇಳಿದ್ದಕ್ಕೆ ಒಂದು 70 ಬರೆದುಕೊಟ್ಟಿದ್ದಾರೆ. ನೀಡ್ ಇದ್ದರೆ ಆ 70ನ್ನು ತೆಗೆದುಕೊಳ್ಳೋಣ. ನಾವು ಮೊದಲು ಇನ್‌ಸ್ಟ್ರಕ್ಷನ್ ಕೊಟ್ಟಿದ್ದು ಎಲ್ಲಿ ಅತ್ಯಂತ ಅವಶ್ಯಕತೆ ಇದೆ ಅಲ್ಲಿ ಇದನ್ನು ತೆಗೆದುಕೊಳ್ಳಬೇಕೆಂದು ಅದೂ ಜರೂರಾಗಿ ಇಂತಹ ಕಡೆ ಎಂದು ಹೇಳಿ ಅಲ್ಲಿ ತೆಗೆದುಕೊಳ್ಳುತ್ತೇವೆಂದು ಹೇಳಿದ್ದೆವು ಆಗ ಅವರು ಒಂದು ಪಟ್ಟಿ ಮಾಡಿ ಕೊಟ್ಟರು ಅದರಲ್ಲಿ ಒಂದು 20-25 ಹಳ್ಳಿಗಳು ಬರುತ್ತವೆ. ಅದರಂತೆ ಈಗಾಗಲೇ 15 ಪ್ರಾರಂಭ ಮಾಡಿದ್ದಾರೆ ಉಳಿದ 15ಕ್ಕೆ ಫಂಡ್ ರಿಲೀಜ್ ಆಗಿದೆ ಮೂರು ದಿವಸಗಳ ಹಿಂದೆ ಪ್ರಾವಿಜನ್ ಮಾಡಿದ್ದೇವೆ. ಬಹುಶಃ ಅಲ್ಲಿಗೆ ಹಣ ಹೋಗಿರಬಹುದು. ತಾವು ಇಲ್ಲಿ ಇದ್ದೀರಿ ಅಲ್ಲಿ ತೆಗೆದುಕೊಳ್ಳುತ್ತಾರೆ.

ಅಧ್ಯಕ್ಷರು : ಮಾನ್ಯ ಹೆಚ್.ಎಸ್. ಪಾಟೀಲರೇ ನಿಮ್ಮ ಪ್ರಶ್ನೆಯನ್ನು ಆರ್.ಡಿ.ಪಿ.ಆರ್.ಗೆ ವರ್ಗಾವಣೆ ಮಾಡಿದ್ದೇನೆ.

ಚಿತ್ರದುರ್ಗ ಜಿಲ್ಲೆ ಹೊಸದುರ್ಗ ತಾಲ್ಲೂಕಿನಲ್ಲಿ ತೆಂಗಿನ ಬೆಳೆ ನಾಶಪಡಿಸುವ ಕಪ್ಪು ತಲೆ ಹುಳುವಿನ ರೋಗ ನಿಯಂತ್ರಿಸಲು ಕ್ರಮ

1411 ಶ್ರೀ ಎ.ವಿ. ವಿಜಯಕುಮಾರ್ (ಹೊಸದುರ್ಗ) : ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

(ಅ) ರಾಜ್ಯದಲ್ಲಿರುವ ತೆಂಗಿನ ಬೆಳೆಗೆ ಯಾವುದಾದರೂ ರೋಗ ತಗುಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

(ಬ) ಹಾಗಿದ್ದರೆ, ಚಿತ್ರದುರ್ಗ ಜಿಲ್ಲೆ ಹೊಸದುರ್ಗ ತಾಲ್ಲೂಕಿನಲ್ಲಿ ಅಪಾರವಾಗಿರುವ ತೆಂಗಿನ ಬೆಳೆ ಸಂಪತ್ತನ್ನು ನಾಶಪಡಿಸುತ್ತಿರುವ ಕಪ್ಪು ತಲೆ ಹುಳುವಿನ ರೋಗ ನಿಯಂತ್ರಿಸಲು ಸರ್ಕಾರವು ಏನು ಕ್ರಮ ಜರುಗಿಸಿದೆ?

(ಇ) ಹಾಗಿದ್ದಲ್ಲಿ, ಸದರಿ ತಾಲ್ಲೂಕಿನಲ್ಲಿ ಪದೇ ಪದೇ ರೈತರಿಗೆ ಸಮಸ್ಯೆಯಾದ ಈ ರೋಗ ತಡೆಗೆ ಶಾಶ್ವತ ಪರಿಹಾರ ನೀಡಲು ಸಾಧ್ಯವೇ?

ಶ್ರೀ ಜೆ. ಪುಟ್ಟಸ್ವಾಮಿಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು):